



ಮೂಲಭೂತವಾಗಿ ಸ್ತ್ರೀಗೆ ಸ್ವಾತಂತ್ರ್ಯ ಇದ್ದೇ ಇದೆ. ಆದರೆ ಸಮಾಜದಲ್ಲಿ ಅದನ್ನು ಸ್ವೀಕರಿಸುವ ಮನಃಸ್ಥಿತಿ ಇನ್ನೂ ನಿರ್ಮಾಣವಾಗಿಲ್ಲ. ಎಲ್ಲರಿಗೂ ನೈತಿಕ ಅನೈತಿಕವೆಂಬ ಗಡಿಗಳು ಎಷ್ಟು ಒಗ್ಗಿ ಹೋಗಿವೆಯೆಂದರೆ, ನನ್ನ ದೇಹ ನನ್ನದೆಂಬ ಮನಃಸ್ಥಿತಿ ತಪ್ಪೆಂದೇ ಎಲ್ಲರಿಗೂ ಅನಿಸುತ್ತದೆ. ಒಂದೊಂದು ಸಲ ನಮಗೂ ಅದು ತಪ್ಪೆಂದು ಅನಿಸುತ್ತದೆ! ಇದನ್ನು ಹೊರಗಿನ ಮಾತಾಗಿ ಹೇಳುವುದಕ್ಕೂ, ನಮ್ಮೊಳಗಿನ ಮಾತಾಗಿ ಶೋಧಿಸುವುದಕ್ಕೂ ಭಿನ್ನತೆಯಿದೆ. ನಮಗೇನು ಬೇಕಾಗಿದೆ ಎಂದು ಕೇಳಿಕೊಳ್ಳುವುದು ಮುಖ್ಯ.

◆ **ನಿಮ್ಮದೊಂದು ಕಥೆಯ ಪಾತ್ರ ಹೇಳ್ತದೆ: ‘ಕಾಮ ಎನ್ನುವುದು ನಾವಿಬ್ಬರೂ ಕೂತು ಸಹಜವಾಗಿ ಮಾತಾಡಿದಂತೆ, ಜೊತೆಯಲ್ಲಿ ಐಸ್‌ಕ್ರೀಮ್ ತಿಂದಂತೆ... ಅದು ಸ್ನೇಹದ ಒಂದು ವಿಸ್ತರಣೆ ಅಷ್ಟೆ. ಅದನ್ನು ಪವಿತ್ರ, ಅಪವಿತ್ರ ಎರಡೂ ಪಾತ್ರಗಳಲ್ಲಿ ಹಾಕಿ ನೋಡುವುದು ನಮ್ಮ ದೃಷ್ಟಿಕೋನಗಳು’. ಇಂಥ ವಿಚಾರಗಳೆಲ್ಲ ಆ ಕಾಲಕ್ಕೆ ಜೀರ್ಣಿಸಿಕೊಳ್ಳಲಾಗದ ತುತ್ತೇ ಆಗಿದ್ದವು. ಬೋಲ್ಡ್ ಬರವಣಿಗೆಯಿಂದ ನೀವು ಕಳೆದುಕೊಂಡಿದ್ದು ಏನಾದರೂ ಇದೆಯೆನಿಸುತ್ತದೆಯೇ?**

ನನ್ನ ಬರವಣಿಗೆಯನ್ನು ಬಹುಪಾಲು ಸಮಕಾಲೀನ ನವ್ಯ ಲೇಖಕರು ಪಿ. ಲಂಕೇಶ್, ಯು.ಆರ್. ಅನಂತಮೂರ್ತಿ, ಸುಮತೀಂದ್ರ ನಾಡಿಗ ಇತ್ಯಾದಿ, ಬೆಂಬಲಿಸಿದರು. ನವ್ಯ ಸಂದರ್ಭದ ಬದುಕನ್ನು ನೋಡುವ ಈ ಮುಕ್ತನೋಟ ನನ್ನ ಬೆನ್ನಿಗಿತ್ತು. ಆದರೆ ಸಮಕಾಲೀನ ಲೇಖಕಿಯರೇ ಅನೇಕರು ನನ್ನನ್ನು ಬೆಂಬಲಿಸಲಿಲ್ಲ. ನನ್ನನ್ನು ಪ್ರೀತಿಸುತ್ತಿದ್ದ ಅನೇಕ ಹಿರಿಯರು, ನನ್ನ ಕೆಲವು ಪ್ರಾಧ್ಯಾಪಕರು ಒಂದು ದೂರವನ್ನು ಕಾಯ್ದುಕೊಂಡರು. ಅವರಿಗೆ ನನ್ನ ಬರವಣಿಗೆ ಪಥ್ಯವಾಗಲಿಲ್ಲ. ಅವರನ್ನು ಕಳೆದುಕೊಂಡಿದ್ದು ನನಗಾದ ನಷ್ಟ. ಆ ವೇಳೆ ನನಗೆ ಬಾಡಿಗೆ ಮನೆ ಸಿಗುವುದೂ ಕಷ್ಟವಾಯಿತು. ನೇರವಾಗಿ ಹೇಳಲಾರದವರು ಬೆನ್ನ ಹಿಂದಿನಿಂದ ಆಡಿಕೊಳ್ಳುತ್ತಿದ್ದರು. ಕಾಲಕ್ಕಿಂತ ಭಿನ್ನವಾಗಿ ಯೋಚಿಸಲು, ಸಿದ್ಧ ಮಾದರಿಯನ್ನು ಮುರಿಯಲು ತೆರಲೇಬೇಕಾದ ಬೆಲೆಯೇನೋ ಇದು.



ಶಾಂತಿನಾಥ ದೇಸಾಯಿಯಂಥವರು ನನ್ನನ್ನು ಪೂರ್ಣವಾಗಿ ಬೆಂಬಲಿಸಿದರು. ಅಂದಿನ ಬಹಳಷ್ಟು ವಿಮರ್ಶಕರೂ ನನ್ನ ಬರವಣಿಗೆಯನ್ನು ಮುಕ್ತವಾಗಿ ಸ್ವಾಗತಿಸಿದರು. ಕೆಲವು ಹಿರಿಯ ವಿಮರ್ಶಕರು ಟೀಕಿಸಿದ್ದು ಉಂಟು. ನನ್ನ ‘ಬಿಡುಗಡೆ’ ಕಥೆಯಲ್ಲಿ ಹೆಣ್ಣೊಬ್ಬಳು ಸಂಗಾತಿಯಿಂದ ನಿರೀಕ್ಷಿಸುವುದನ್ನು ಹಾಗೂ ವಾಸ್ತವದ ಅಧಿಕಾರ ಸಂಬಂಧದಲ್ಲಿ ಆ ನವಿರಾದ ಭಾವಗಳು ಸತ್ತುಹೋಗುವುದನ್ನು ರೂಪಕಾತ್ಮಕವಾಗಿ ಅಭಿವ್ಯಕ್ತಿಸಲಾಗಿತ್ತು. ಚಹಾ ಮಾಡಿಕೊಡುವುದು, ವಾಕಿಂಗ್ ಹೋಗುವುದು... ಇವೆಲ್ಲ ದೊಡ್ಡ ತ್ಯಾಗದ ವಿಚಾರಗಳೇನಲ್ಲ. ಇಂತಹ ಸಣ್ಣ ವಿಷಯಗಳಲ್ಲೇ ಹೆಣ್ಣಿಗೆ ಎಷ್ಟು ಖುಷಿ ಸಿಗುವುದೆಂಬುದು ಪುರುಷರಿಗೆ ಗೊತ್ತಾಗುವುದಿಲ್ಲ. ಸಮಾನ ನೆಲೆಯ ಸಖ್ಯದಲ್ಲಿ ಸಹಜವಾಗಿ ಸಾಧ್ಯವಾಗಬಹುದಾದ ಸಣ್ಣ ಸಂಗತಿಯಿದು. ಕೆಲವು ಖ್ಯಾತ ವಿಮರ್ಶಕರು ‘ಗಂಡ ಚಹಾ ಮಾಡಿಕೊಡದಿದ್ದರೆ ಕೆಟ್ಟವನೇ?’ ಅಂತ ಕಟಕಿ ಆಡಿದ್ದರು. ‘ನಿಮಗಷ್ಟೇ ತಿಳಿಯುವುದು, ನಾನೇನು ಮಾಡಲಿ?’ ಅಂದಿದ್ದೆ. ಶಾಂತಿನಾಥ ದೇಸಾಯಿಯವರು ಮಾತ್ರ ಬಹಳ ಪ್ರಾಮಾಣಿಕವಾಗಿ ಸ್ತ್ರೀಯೊಳಗಿನ ಅಂತಃಸತ್ವವನ್ನು ಮುಟ್ಟಲು ಗಂಡು ಎಂದೂ ಶಕ್ತನಲ್ಲ ಎಂದಿದ್ದರು. ಅವನು ಎಷ್ಟೇ ತಿಳಿದವನಾಗಿದ್ದರೂ, ಓದಿದವನಾಗಿದ್ದರೂ,